# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರು ನಿಯಮ–72ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

---

**ವಿಷಯ:** ಮೈಸೂರು – ಬೆಂಗಳೂರು ದಶಪಥ ಎಕ್ಸ್‌ಪ್ರೆಸ್ ಮಾರ್ಗದಲ್ಲಿ ನಿತ್ಯವೂ ಅವಾಂತರಗಳು ನಡೆಯುತ್ತಿದ್ದು, ಸಾವು–ನೋವುಗಳಿಗೆ ಕಾರಣವಾಗುತ್ತಿವೆ. ಈ ಬಗ್ಗೆ ಮಾಧ್ಯಮಗಳು, ಸಾರ್ವಜನಿಕರು, ಜನಪ್ರತಿನಿಧಿಗಳು ಧ್ವನಿ ಎತ್ತುತ್ತಲೇ ಇದ್ದಾರೆ. ಆದರೂ ಈ ಬಗ್ಗೆ ಇನ್ನೂ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ಸಭೆಯಲ್ಲಿ ಶಾಸಕರು ದೂರಿದರು. ಅಪಘಾತಗಳು ಹೆಚ್ಚಳವಾಗುವುದಕ್ಕೆ ಕಾರಣಗಳೇನು? ಮಳೆಗಾಲದಲ್ಲಿ ನೀರು ರಸ್ತೆಗಳಲ್ಲೇ ನಿಲ್ಲಲು ಕಾರಣಗಳೇನು ಸರ್ವೀಸ್ ರಸ್ತೆಯಲ್ಲೂ ನೀರು ನಿಲ್ಲುತ್ತಿದ್ದು, ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಹೈವೇಯಲ್ಲಿ ಹಾಕಿರುವ ರಸ್ತೆ ದೀಪಗಳು ಹಾಳಾಗಿದ್ದು, ರಾತ್ರಿ ವೇಳೆ ಸಂಚಾರ ಕಷ್ಟವಾಗುತ್ತಿದೆ. ಅಂಡರ್‌ಪಾಸ್‌ನಲ್ಲಿ ಅನೇಕ ಸಮಸ್ಯೆಗಳಿವೆ. ಚೈನ್ ಲಿಂಕ್ ಸರಿಯಾಗಿ ಆಗಿಲ್ಲ. ಪಾರ್ಕಿಂಗ್ ಸಮಸ್ಯೆ ಇದೆ. ಆಂಬ್ಯುಲೆನ್ಸ್ ವ್ಯವಸ್ಥೆ ಇಲ್ಲ, ಸ್ಕೈವಾಕ್‌ಗಳ ನಿರ್ಮಾಣ ಬಾಕಿ ಇದೆ, ಎಕ್ಸಿಟ್ ಮತ್ತು ಎಂಟ್ರಿ ಪಾಯಿಂಟ್‌ಗಳು ಆಗಿಲ್ಲದಿರುವುದರಿಂದ ಈ ವಿಷಯವನ್ನು ಸರ್ಕಾರದ ಗಮನ ಸೆಳೆಯಲು ಬಯಸುತ್ತೇನೆ.

### ಸರ್ಕಾರದ ಉತ್ತರ

ಮೈಸೂರು – ಬೆಂಗಳೂರು ದಶಪಥ ಎಕ್ಸ್‌ಪ್ರೆಸ್ ರಾಷ್ಟ್ರೀಯ ಹೆದ್ದಾರಿ–275 ಕಾಮಗಾರಿಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರರವರ ಕಾರ್ಯವ್ಯಾಪ್ತಿಗೆ ಒಳಪಡುತ್ತದೆ. ಸದರಿಯವರು ಈ ಕೆಳಕಂಡಂತೆ ಉತ್ತರವನ್ನು ನೀಡಿರುತ್ತಾರೆ.

- ಪೋಲೀಸ್ ಇಲಾಖೆಯಿಂದ ರಾಷ್ಟ್ರೀಯ ಹೆದ್ದಾರಿ–275ರ ಹೆದ್ದಾರಿಯಲ್ಲಿ ಸಂಭವಿಸುತ್ತಿರುವ ಅಪಘಾತಗಳ ಕುರಿತು ಪಡೆದ ವರದಿಯ ಪ್ರಕಾರ, ವಿನ್ಯಾಸಗೊಳಿಸಿದ ನಿಗದಿತ ವೇಗದ ಮಿತಿಗಿಂತ (100 KMPH) ಹೆಚ್ಚಿನ ವೇಗದಲ್ಲಿ ವಾಹನಗಳನ್ನು ಚಲಾಯಿಸುವುದರಿಂದ ಹಾಗೂ ವಾಹನಗಳು ಲೇನ್ ಶಿಸ್ತನ್ನು ಅನುಸರಿಸದ ಕಾರಣ ಅಪಘಾತಗಳು ಸಂಭವಿಸುತ್ತಿವೆ ಎಂದು ವರದಿಸಿರುತ್ತಾರೆ.
- ಅದಾಗ್ಯೂ, ಅಪಘಾತಗಳನ್ನು ತಪ್ಪಿಸಲು ಈ ಕೆಳಕಂಡ ಮುಂಜಾಗ್ರತಾ ಹೆಚ್ಚುವರಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1) ಹೆಚ್ಚುವರಿ ವೇಗದ ಮಿತಿಯನ್ನು ಸೂಚಿಸುವ ನಾಮಫಲಕ.
2) ಪ್ರತಿ ಪ್ರವೇಶ ಮತ್ತು ನಿರ್ಗಮನ ಸ್ಥಳದಲ್ಲಿ PTZ ಕ್ಯಾಮೆರಾ ಅಳವಡಿಕೆ.
3) ಲೇನ್ ಶಿಸ್ತು ರಸ್ತೆ ಗುರುತುಗಳು ಮತ್ತು ಸೂಚನಾ ಫಲಕಗಳು.
4) ಹೆದ್ದಾರಿಯಲ್ಲಿ ನೀರು ನಿಲ್ಲುವುದನ್ನು ತಪ್ಪಿಸಲು ಚರಂಡಿಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸುವುದು.
5) ಪ್ರವೇಶ ಮತ್ತು ನಿರ್ಗಮನ ಸ್ಥಳಗಳ ಬಳಿ ಸರ್ವಿಸ್ ರಸ್ತೆಯಲ್ಲಿ ಸ್ಪೀಡ್ ಬ್ರೇಕರ್‌ಗಳ ನಿರ್ಮಾಣ.

Public Works

SL No: 72
15ನೇ ಲಿ
09/08/2023

- ಬೆಂಗಳೂರು – ಮೈಸೂರು ಹೆದ್ದಾರಿಯ ಕೆಲವು ಭಾಗಗಳಲ್ಲಿ ಸ್ಥಳೀಯರ ಪ್ರತಿರೋಧದಿಂದಾಗಿ ಚರಂಡಿ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಸಂಬಂಧ ರಾಜ್ಯದ ಸ್ಥಳೀಯ ಆಡಳಿತ ಪ್ರಾಧಿಕಾರದ ಸಹಾಯದಿಂದ ಚರಂಡಿ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ.
- ಬೆಂಗಳೂರು–ಮೈಸೂರು ಹೆದ್ದಾರಿಯ ಜನನಿಬಿಡ ಪ್ರದೇಶಗಳಲ್ಲಿ ಕೆಳಸೇತುವೆ/ಇತರೆ ಅಗತ್ಯವಿರುವ ಸ್ಥಳಗಳಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಿ ರಿಯಾಯಿತಿದಾರರಿಂದ ನಿರ್ವಹಣಾ ಕಾರ್ಯಕೈಗೊಳ್ಳಲಾಗುತ್ತಿದೆ. ಸ್ವತಂತ್ರ ಇಂಜಿನಿಯರ್ ಅನುಮೋದಿಸಿದ ವಿನ್ಯಾಸದ ಪ್ರಕಾರ ಮತ್ತು IRC ಮಾರ್ಗಸೂಚಿಗಳನ್ವಯ ಎಲ್ಲಾ ಅಂಡರ್‌ಪಾಸ್‌ಗಳನ್ನು ನಿರ್ಮಾಣ ಮಾಡಲಾಗಿದೆ. ಆದರೆ ಕೆಲವು ಕೆಳಸೇತುವೆಗಳ ಬಳಿ ಅಳವಡಿಸಿರುವ ವಿದ್ಯುತ್ ದೀಪಗಳು ಕಳುವಾಗುತ್ತಿದ್ದು, ವಿದ್ಯುತ್ ದೀಪಗಳನ್ನು ಮತ್ತೊಮ್ಮೆ ರಿಯಾಯಿತಿದಾರರಿಂದ ಅಳವಡಿಸಲಾಗುತ್ತಿದೆ.
- ಅನುಮೋದಿತ ರೇಖಾಚಿತ್ರದಂತೆ ಹೆದ್ದಾರಿಯುದ್ದಕ್ಕೂ ಚೈನ್ ಲಿಂಕ್ ಫೆನ್ಸಿಂಗ್‌ಗಳನ್ನು ಸ್ಥಾಪಿಸಲಾಗಿದೆ. ಆದರೆ, ಸ್ಥಳೀಯ ಜನರು ಮತ್ತು ರೆಸ್ಟೋರೆಂಟ್ ಮಾಲೀಕರಿಂದ ಚೈನ್‌ಲಿಂಕ್ ಫೆನ್ಸಿಂಗ್‌ಗಳನ್ನು ಅನಧಿಕೃತವಾಗಿ ತೆರವುಗೊಳಿಸಲಾಗುತ್ತಿದೆ ಹಾಗೂ ಕಳುವಾಗುತ್ತಿದ್ದು, ಸ್ಥಳೀಯ ಪೋಲೀಸ್ ಇಲಾಖೆಗೆ ದೂರನ್ನು ಸಲ್ಲಿಸಲಾಗಿರುತ್ತದೆ.
- ಸದರಿ ಹೆದ್ದಾರಿಯಲ್ಲಿ ಸಂಭವಿಸುತ್ತಿರುವ ಅಪಘಾತಗಳಲ್ಲಿ ಗಾಯಗೊಂಡವರ ಚಿಕಿತ್ಸೆಗಾಗಿ, ಅಪಘಾತಗೊಂಡ ಸ್ಥಳವನ್ನು 20 ನಿಮಿಷದಲ್ಲಿ ತಲುಪುವಂತೆ ನರ್ಸ್‌ಗಳೊಳಗೊಂಡಂತೆ Basic life support system ಹೊಂದಿರುವ 4 ಆಂಬುಲೆನ್ಸ್‌ಗಳನ್ನು ಒದಗಿಸಲಾಗಿರುತ್ತದೆ. ಅಲ್ಲದೆ, ಟೋಲ್ ಪ್ಲಾಜಾ ಸ್ಥಳದಲ್ಲಿ ಟ್ರಾಫಿಕ್ ಏಡ್ ಪೋಸ್ಟ್ ಮತ್ತು ವೈದ್ಯಕೀಯ ನೆರವು ಪೋಸ್ಟ್ ಅನ್ನು ಒದಗಿಸಲಾಗಿದೆ.
- ಹೆದ್ದಾರಿಯ ಗಸ್ತು ತಿರುಗುವಿಕೆಗಾಗಿ, ಯಾವುದೇ ವಾಹನದ ಸ್ಥಗಿತ ಅಥವಾ ಯಾವುದೇ ತುರ್ತುಸ್ಥಿತಿಗೆ ಹಾಜರಾಗಲು 4 ಹೈವೇ ಗಸ್ತು ವಾಹನಗಳನ್ನು (ಪ್ರತಿ ಪ್ಯಾಕೇಜ್‌ಗೆ 2) 24x7 ಅವಧಿಗೆ ಒದಗಿಸಲಾಗಿದೆ. 4 ಕ್ರೇನ್‌ಗಳನ್ನು (ಪ್ರತಿ ಪ್ಯಾಕೇಜ್‌ನಲ್ಲಿ 2) ಕೆಟ್ಟು ಹೋದ ವಾಹನಗಳನ್ನು ತೆಗೆದು ಹಾಕಲು ಅಥವಾ ಹೆದ್ದಾರಿಯಲ್ಲಿ ಅಪಘಾತಕ್ಕೀಡಾದ ವಾಹನವನ್ನು ಎಳೆಯಲು ಟೋಲ್ ಪ್ಲಾಜಾ ಸ್ಥಳದಲ್ಲಿ ಇರಿಸಲಾಗಿದೆ.
- NH-275 ರ ಬೆಂಗಳೂರಿನಿಂದ ಮೈಸೂರಿನವರೆಗೆ ರಿಯಾಯಿತಿ ಒಪ್ಪಂದದ ಪ್ರಕಾರ ಒಟ್ಟು 14 ಪ್ರವೇಶ ಮತ್ತು ನಿರ್ಗಮನವನ್ನು ಒದಗಿಸಲಾಗಿದೆ.
- ಪಾದಚಾರಿಗಳ ಅಡ್ಡ ಸಂಚಾರಕ್ಕೆ ಹಾಗೂ ಸ್ಥಳೀಯ ಸಂಚಾರಕ್ಕೆ ಅನುಕೂಲವಾಗುವಂತೆ ಕೆಳ ಸೇತುವೆಗಳನ್ನು ಒದಗಿಸಲಾಗಿದೆ. ಇದಲ್ಲದೆ, ಪಾದಚಾರಿ ಸೇತುವೆಗಳ ನಿರ್ಮಾಣಕ್ಕಾಗಿ ಮೂಲ ಕಾಮಗಾರಿಯಲ್ಲಿ ಪ್ರಸ್ತಾವನೆ ಇರುವುದಿಲ್ಲ. ಆದರೆ, ಸ್ಥಳೀಯ ಸಾರ್ವಜನಿಕರಿಂದ ಫುಟ್ ಓವರ್ ಸೇತುವೆಗಳ ನಿರ್ಮಾಣಕ್ಕಾಗಿ ಬೇಡಿಕೆಯನ್ನು ಪರಿಗಣಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆಯಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಲೋಇ 157 ಸಿಎನ್‌ಹೆಚ್ 2023 (ಇ)